ಅಂದಿದ್ದರಲ್ಲ ಅವರು? ಅದೇ ದಿನ ರಾತ್ರಿ ನಾವೆಲ್ಲ ನಮ್ಮ ಬಯೋಡಾಟಾದ ತಲಾ ಇಪ್ಪತ್ತೈದು ಪ್ರತಿ ಫೋಟೊ ಕಾಪಿ ಮಾಡಿಸಿ ಸಿಕ್ಕ ಸಿಕ್ಕ ಕಂಪನಿಗೆ ಕಳಿಸಲು ಸಿದ್ಧಮಾಡಿಕೊಂಡಿದ್ದೆವಲ್ಲ, ನೆನಪಿದ್ಯಾ?'' ಆತನನ್ನು ಕೆಣಕುವ ರೀತಿಯಲ್ಲಿ ಕೇಳಿದೆ ನಾನು.

''ಹೂಂ... ಹೌದು'' ಅನ್ನುತ್ತ ಗಹಗಹಿಸಿ ನಕ್ಕ ಆತ.

''ಹೋಗಲಿ ಬಿಡು. ಇಷ್ಟು ವರ್ಷ ಆಯ್ತು ಕಾಲೇಜು ಬಿಟ್ಟು. ನಿನಗೆ ನಿನ್ನ ಪ್ಯಾಶನ್ ಏನು ಅನ್ನೋದು ಗೊತ್ತಾಗಿದೆಯಾ? ನೀನು ಅಮೆರಿಕ ಪಾಲಾಗಿರುವುದು ಅದೇ ಪ್ಯಾಶನ್ನಿನ ಬೆನ್ನು ಹತ್ತಿ ಅನ್ನಿಸುತ್ತಿದೆಯಾ?''

''ನಾನು ಮಾಡಿದ ತಪ್ಪನ್ನು ನಮ್ಮ ಮಕ್ಕಳೂ ಮಾಡಬಾರದು ಅಂತಾ ಈ ಪ್ರಯತ್ನ'' ಆತ ಸಮಜಾಯಿಷಿ ನೀಡತೊಡಗಿದ.




ಹೌದು. ನಿಮ್ಮ ಹೃದಯದ ಕರೆಗೆ ಓಗೊಡಿ. ನಿಮಗೇನು ಇಷ್ಟವೋ ಅದನ್ನೇ ನಿಮ್ಮ ವೃತ್ತಿಯನ್ನಾಗಿ ಆಯ್ದುಕೊಳ್ಳಿ. ಆಗ ಜೀವನದಲ್ಲಿ ಯಶ ಸಾಧಿಸುತ್ತೀರಿ. ಇಂತಹ ಹೇಳಿಕೆಗಳು ಕ್ಲೀಷೆಯೆನಿಸುವಷ್ಟು ನಮಗೆ ಸಿಗುತ್ತವೆ. ಅದು ಯಾವ ಮಟ್ಟಿಗೆಂದರೆ, ಕ್ರಿಕೆಟ್ಟಿನಲ್ಲಿ ಆಸಕ್ತಿಯುಳ್ಳ ಹುಡುಗ ಅದರಲ್ಲೇ ಮುಂದುವರೆದರೆ ಮುಂದೊಂದು ದಿನ ಸಚಿನ್ ತೆಂಡೂಲ್ಕರ್ ಆಗಬಹುದು. ಸಂಗೀತವನ್ನೇ ನೆಚ್ಚಿ ಹೊರಟವ ಎ.ಆರ್. ರೆಹಮಾನ್ ಲೆವೆಲ್ಲಿಗೆ ಏರಲೂಬಹುದು ಅನ್ನುವಷ್ಟು. ಸ್ಟೀವ್ ಜಾಬ್ಸ್‌ನಿಂದ ಹಿಡಿದು ನಾರಾಯಣ ಮೂರ್ತಿಯವರೆಗೂ ಯಾರು ಕೇಳಿದರೂ ಇದೇ ಮಾತನ್ನೇ ತಿರುಗಿ ಮುರುಗಿ ಹೇಳಿದವರೇ. ಈ ಸ್ಫೂರ್ತಿದಾಯಕ ಹೇಳಿಕೆಗಳ ಮಜವೇ ಅಂಥದ್ದು. ಕೇಳಲು ಬಹು ಆಕರ್ಷಕವೂ ರೊಮಾಂಟಿಕ್ ಆಗಿಯೂ ಇರುತ್ತವೆ. ಆದರೆ, ಅದನ್ನು ನಿಜಕ್ಕೂ ಕಾರ್ಯಗತಗೊಳಿಸುವುದು ಹೇಗೆಂದು ಮಾತ್ರ ಗೊತ್ತಾಗುವುದಿಲ್ಲ. 'ನಿನ್ನ ಜೀವನವನ್ನು ಬಿಡಿಸುವ ಕಲಾವಿದ ನೀನೇ. ಬೇರೆ ಯಾರ ಕೈಗೋ ಕುಂಚ ಕೊಡಬೇಡ' ಎಂದು ಯಾರೋ ಅಂದರೆ; 'ನಿನ್ನೊಳಗಿನ ಕಿಡಿಯನ್ನು ಆರದಂತೆ ಕಾಪಿಟ್ಟುಕೋ' ಎಂದು ಮತ್ಯಾರೋ ನುಡಿದರೆ, ಈ ಕುಂಚ-ಕಿಡಿಗಳನ್ನು ಹೇಗೆ ಪತ್ತೆ ಹಚ್ಚೋಣ? 'ನಿನ್ನ ಇಷ್ಟವನ್ನು ಬೆನ್ನತ್ತಿ ಹೋಗು' ಅನ್ನುವ ಮಾತು ಕೂಡಾ ಅದೇ ಸಾಲಿಗೆ ಸೇರುವಂಥದ್ದು ಅನ್ನಿಸುತ್ತದೆ ನನಗೆ. ಇಂಗ್ಲಿಷಿನಲ್ಲಿ ಸಿಕ್ಕಾಪಟ್ಟೆ ಬಳಕೆಯಾಗುವ ಪ್ಯಾಶನ್ ಎಂಬ ಪದಕ್ಕೆ ಕನ್ನಡದಲ್ಲಿ ಏಕಮಾತ್ರ ಪರ್ಯಾಯ ಪದ ಸಿಗುತ್ತಿಲ್ಲ. 'ಉತ್ಕಟಾಕಾಂಕ್ಷೆ' ಅನ್ನಬಹುದೇನೋ. ಆ ನಮ್ಮ ಉತ್ಕಟಾಕಾಂಕ್ಷೆ ಏನೆಂಬುದನ್ನು ಪತ್ತೆ ಹಚ್ಚಿ ಅದನ್ನೇ ನಮ್ಮ ಜೀವನದ ಪ್ರಥಮ ಆದ್ಯತೆಯನ್ನಾಗಿಸಿಕೊಳ್ಳಬೇಕು ಎಂಬುದನ್ನೇ ತಾನೆ ಎಲ್ಲರೂ ಹೇಳುತ್ತಿರುವುದು? ಹಾಗಾದರೆ, ನಮಗಾವುದರಲ್ಲಿ ಅತೀವ ಆಸಕ್ತಿ? ಆ ಆಸಕ್ತಿಯೆಂಬುದು ಕೇವಲ ಒಂದೇ ಸಂಗತಿಯಲ್ಲಿ ಇರಬೇಕೆಂದಿದೆಯೇ? ಅದು ಕಾಲ ಕಾಲಕ್ಕೆ ಬದಲಾಗಬಾರದೇಕೆ? ನಮ್ಮಿಷ್ಟದ ಸಂಗತಿಯಲ್ಲಿಯೇ ನಮಗೆ ಕೌಶಲವೂ ಇರಬೇಕೆಂದುಂಟೇ? ಈ ಎಲ್ಲ ಪ್ರಶ್ನೆಗಳಿಗೆ ಹೌದು ಯಾ ಇಲ್ಲ ಎನ್ನುವ ನಿಖರ ಉತ್ತರವಿಲ್ಲ. ಹೀಗಿರುವಾಗ ನನ್ನ ಅಮೆರಿಕದ ಗೆಳೆಯನ 'ಚಕ್‌ಲಿಸ್ಟ್' ಇದ್ದರೂ ನನ್ನ